**ದಿನಾಂಕಃ 10-08-2026 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನವನ್ನು ಬೋಧಿಸಲಾಯಿತು .**

**ಪಾಟೀ ಸವಾಲುಃ 1 ನೆ ಎದುರುದಾರರ ಪರ ಶ್ರೀ. ಕೆ ಎಸ್ ವಕೀಲರಿಂದಃ**

1. ನಾನು ಬಿರ್ಲಾ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದೆ ಎಂದರೆ ಸರಿ. ನಾನು 2007 ರಲ್ಲಿ ಆ ಕೆಲಸ ಬಿಟ್ಟಿರುತ್ತೇನೆ. ನಾನು ಬಿರ್ಲಾ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದಾಗ ಸ್ಟೇಟ್ ಬ್ಯಾಂಕ್ ಆಫ ಮೈಸೂರಿನಿಂದ ಸಾಲ ಪಡೆದು ಮನೆ ಕಟ್ಟಿರುತ್ತೇನೆ ಎಂದರೆ ಸರಿ. ನಾನು ಸಾಲ ಸರಿಯಾಗಿ ಕಟ್ಟದ ಕಾರಣ 2011 ರಲ್ಲಿ ಬ್ಯಾಂಕ್ ನವರು ನನ್ನ ಮನೆಯನ್ನು ಹರಾಜು ಮಾಡಿದ್ದರು ಎಂದರೆ ಸರಿ. 3 ನೆ ಪ್ರತಿವಾದಿ ನಾಗರಾಜ ಹರಾಜಿನಲ್ಲಿ ಮನೆಯನ್ನು ಖರೀದಿಸಿದ್ದಾರೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ಹೇಳುತ್ತಾರೆ. ಆ ಹರಾಜು ಸರಿಯಾಗಿಲ್ಲ ಎಂದು ಹಾವೇರಿ ಜಿಲ್ಲಾ ಗ್ರಾಹಕರ ನ್ಯಾಯಾಲಯದಲ್ಲಿ ಸಿಸಿ ನಂಃ 51/2016 ರಂತೆ ಅರ್ಜಿ ಸಲ್ಲಿಸಿದ್ದೆ ಎಂದರೆ ಸರಿ. ಸದರಿ ಅರ್ಜಿ ವಜಾ ಆಗಿರುತ್ತದೆ ಎಂದರೆ ಸರಿ. ಹರಾಜು ಸರಿಯಾಗಿಲ್ಲ ಎಂದು ಬ್ಯಾಂಕ್ ನವರ ಮೇಲೆ ಓ ಎಸ್ ನಂಃ 89/2018 ರಂತೆ ನಾನು ಒಂದು ದಾವೆ ಮಾಡಿರುತ್ತೇನೆ ಎಂದರೆ ಸರಿ. ಸದರಿ ದಾವೆದಲ್ಲಿ ಪ್ರತಿವಾದಿಗಳು ಹಾಜರಾಗಿರಲಿಲ್ಲ ಎಂದರೆ ಸರಿ. ಮಾನ್ಯ ನ್ಯಾಯಾಲಯದವರು ನಾನು ಹಾಜರು ಪಡಿಸಿದ ದಾಖಲೆಗಳನ್ನು ಪರಿಶೀಲಿಸಿ 3 ವರ್ಷ 11 ತಿಂಗಳು 11 ದಿವಸ ತಡವಾಗಿದೆ ಎಂದು ಹೇಳಿ ದಾವೆ ವಜಾ ಮಾಡಿರುತ್ತಾರೆ ಎಂದರೆ ಸರಿ. ದಿಃ 11-04-2023 ರಂದು ಸದರಿ ದಾವೆ ವಜಾ ಆಗಿದೆ ಎಂದರೆ ಸರಿ. ಸದರಿ ಜಡ್ಜಮೆಂಟ್ ಮತ್ತು ಡಿಕ್ರಿಯ ವಿರುದ್ಧ ಈ ಅಪೀಲು ಸಲ್ಲಿಸಿರುತ್ತೇನೆ. ಆ ದಾವೆ ವಜಾ ಆದ ವಿಚಾರ ನನಗೆ ಗೊತ್ತಾಗಿರುತ್ತದೆ. ದಿಃ 11-04-2023 ರಂದು ಆ ದಾವೆ ವಜಾ ಆಗಿದ್ದರೂ ಸಹ ತಡವಾಗಿ ದಿಃ 07-12-2023 ರಂದು ಈ ಮೇಲ್ಮನವಿಯನ್ನು ಬ್ಯಾಂಕ್ ನವರಿಗೆ ತೊಂದರೆ ಕೊಡುವುದಕ್ಕಾಗಿ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

2. ನಾನು ಕೂಲಿ ಕೆಲಸ ಮಾಡುತ್ತಿದ್ದೇನೆ ಎಂದು ಸುಳ್ಳು ಹೇಳಿರುತ್ತೇನೆ ಎಂದರೆ ಸರಿಯಲ್ಲ. ನಾನು ರಾಣೇಬೆನ್ನೂರಿನಲ್ಲಿ ಲಾರಿ ಚಾಲಕನಾಗಿ ಕೆಲಸ ಮಾಡುತ್ತೇನೆ. ಕುಮಾರಪಟ್ಟಣದಲ್ಲಿ ನನ್ನ ಮನೆ ಇರುತ್ತದೆ . ನಾನು ಬಿರ್ಲಾ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದಾಗನಿಂದಲೂ ರಾಣೇಬೆನ್ನೂರಿನಲ್ಲಿ ನ್ಯಾಯಾಲಯ ಇರುವ ವಿಚಾರ ಗೊತ್ತಿರುತ್ತದೆ. ದಿಃ 11-04-2023 ರಂದು ದಾವೆ ವಜಾ ಆಗಿರುವ ವಿಚಾರ ನನಗೆ ಗೊತ್ತಿದ್ದರು ಸಹ ಬ್ಯಾಂಕ್ ನವರಿಗೆ ತೊಂದರೆ ಕೊಡಬೇಕು ಎಂದು ಈ ಮೇಲ್ಮನವಿ ಅರ್ಜಿ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ಜಡ್ಜ ಮೆಂಟ್ ಮತ್ತು ಡಿಕ್ರಿಯ ದೃಢೀಕೃತ ಪ್ರತಿಗಳು ದಿಃ 03-06-2023 ರಂದು ತಯಾರಾಗಿದ್ದು ದಿಃ 06-06-2023 ರಂದು

ದೃಢೀಕೃತ ಪ್ರತಿಗಳನ್ನು ಸ್ವೀಕರಿಸಿದ್ದರೂ ಸಹ ತಡವಾಗಿ ದಿಃ 07-12-2023 ರಂದು ಈ ಮೇಲ್ಮನವಿ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಮೇಲ್ಮನವಿ ಕಾಲಬಾಹಿರವಾಗಿರುತ್ತದೆ ಎಂದರೆ ಸರಿಯಲ್ಲ. ಪ್ರತಿವಾದಿ ಬ್ಯಾಂಕ್ ನವರಿಗೆ ತೊಂದರೆ ಕೊಡುವುದಕ್ಕಾಗಿ ಈ ಮೇಲ್ಮನವಿ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಏನೂ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ.)

ಓ. ಹೇ. ಕೇ. ಸರಿ ಇದೆ.

ಸಹಿ/-

2 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು,
ಮತ್ತು ಜೆ.ಎಂ.ಎಫ್.ಸಿ ರಾಣೇಬೆನ್ನೂರು.